# ರಾಜಾಸ್ಥಾನದ ತೀರ್ಥಕ್ಷೇತ್ರಗಳಲ್ಲಿ ಹತ್ತುದಿನ

ಸ್ವಾಮಿ ರಾಘವೇಶಾನಂದ

**ರಜಪೂತರ ಸಾಹಸಗಾಥೆಗೆ ಪ್ರಸಿದ್ಧವಾದ ರಾಜಾಸ್ಥಾನವು ಶಿಲ್ಪಕಲೆಗೂ ಪ್ರಸಿದ್ಧವಾಗಿದೆ. ಭಾರತೀಯರು ಹೆಮ್ಮೆ ಪಡುವಂತಹ ಕಲಾಕೃತಿಗಳನ್ನು ಸಂದರ್ಶಿಸುವ ಆಸಕ್ತಿಯನ್ನು ಕೆರಳಿಸುತ್ತದೆ ಈ ಲೇಖನ. ಪೂಜ್ಯ ಸ್ವಾಮಿ ರಾಘವೇಶಾನಂದಜಿಯವರು ಬೆಂಗಳೂರಿನ ಹಲಸೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿರುವರು.**

ಬಹಳ ವರ್ಷಗಳಿಂದ ರಾಜಾಸ್ಥಾನದ ತೀರ್ಥಕ್ಷೇತ್ರಗಳಿಗೆ ಭೇಟಿಕೊಡಬೇಕೆಂಬ ಇಚ್ಛೆಯಿತ್ತು. ಈ ವರ್ಷ ಸ್ವಾಮಿ ವೀತಭಯಾನಂದಜಿ ಮತ್ತು ಇಬ್ಬರು ಭಕ್ತರುಗಳ ಜೊತೆ ಹತ್ತುದಿನ ಭೇಟಿಕೊಡುವ ಸದವಕಾಶ ದೊರೆಯಿತು. ನಮ್ಮ ಪ್ರವಾಸ ಸೆಪ್ಟೆಂಬರ್ ೧೩ರಿಂದ, ಗುಜರಾತಿನ ಅಹಮದಾಬಾದಿನಿಂದ ಶುರುವಾಯಿತು. ಸೆಪ್ಟೆಂಬರ್ ೧೪ರಂದು ಅಲ್ಲಿನ ಸ್ವಾಮಿ ನಾರಾಯಣ ಎಂಬ ಆಧ್ಯಾತ್ಮಿಕ ಪ್ರದರ್ಶನ ಮಂದಿರಕ್ಕೆ ಭೇಟಿಯಿತ್ತೆವು. ಅದೊಂದು ಅದ್ಭುತ ಪ್ರದೇಶ. ಆ ಪ್ರದರ್ಶನಾಲಯದ ಹೆಸರು "ಅಕ್ಷರ ಧಾಮ್." ಆ ಪ್ರದರ್ಶನ ಮಂದಿರವನ್ನು ನೋಡಲು ಸುಮಾರು ೩ ಗಂಟೆಗಳ ಕಾಲ ಹಿಡಿಯಿತು. ಇದು ಗುಜರಾತಿಗೆ ಸಂಬಂಧಪಟ್ಟದ್ದಾದುದರಿಂದ ಈಗ ಅದರ ವಿವರಣೆ ಇಲ್ಲಿ ಪ್ರಸ್ತುತವಲ್ಲ. ಆದರೂ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಕುತೂಹಲಕರವಾದ, ಶೈಕ್ಷಣಿಕವಾದ, ಭಕ್ತಿಭಾವವನ್ನು ಸ್ಫುರಿಸುವ ಒಂದು ಅಪೂರ್ವವಾದ ಪ್ರದರ್ಶನ ಇದು ಎಂಬುದನ್ನು ಹೇಳಲೇಬೇಕು.

ಸೆಪ್ಟೆಂಬರ್ ೧೫ರಂದು ಒಂದು ಕಾರಿನಲ್ಲಿ ರಾಜಾಸ್ಥಾನದ ನೈರುತ್ಯ ದಿಕ್ಕಿನಲ್ಲಿರುವ ಮೌಂಟ್ ಅಬೂ ಎಂಬ ಪ್ರದೇಶವನ್ನು ತಲುಪಿದೆವು. ತಲುಪಿದಾಗ ರಾತ್ರಿಯಾಗಿದ್ದುದರಿಂದ ಅಂದು ಏನನ್ನೂ ನೋಡಲು ಸಾಧ್ಯವಾಗಲಿಲ್ಲ. ಇದನ್ನು ಹಿಮವಂತನ ಪುತ್ರ ಎಂದು ಕರೆಯುತ್ತಾರೆ. ಇದು ವಸಿಷ್ಠಮುನಿಗಳು ವಾಸಿಸಿದ್ದ ಸ್ಥಳವೆಂದೂ, ಇಲ್ಲಿ ಅವರ ಯಜ್ಞಕುಂಡದಿಂದ ನಾಲ್ಕು ರಾಜಪುತಾಣ ವಂಶದವರು ಸೃಷ್ಟಿಸಲ್ಪಟ್ಟರೆಂದೂ ಐತಿಹ್ಯ. ಇಲ್ಲಿ ಹಿಂದೆ ಋಷಿಮುನಿಗಳು ತಪಸ್ಸು ಮಾಡುತ್ತಿದ್ದರು. ಇದರ ಕುರುಹಾಗಿ ನೂರಾರು ಪುಟ್ಟ ಪುಟ್ಟ ಗುಹೆಗಳನ್ನು ಎಲ್ಲೆಡೆ ಕಾಣಬಹುದು.

ಇಲ್ಲಿ ಮುಖ್ಯವಾದ ಪ್ರೇಕ್ಷಣೀಯ ಸ್ಥಳವೆಂದರೆ, ಅರ್ಬುದಾದೇವಿ ಅಥವಾ ಅಧರ್ ದೇವಿ ಎಂಬ ದುರ್ಗಾಮಾತೆಯ ದೇವಸ್ಥಾನ. ಒಂದು ದೊಡ್ಡ ಬಂಡೆಯಲ್ಲಿ ಈ ದೇವಸ್ಥಾನ ಕೊರೆಯಲ್ಪಟ್ಟಿದೆ. ಇಲ್ಲಿಂದ ಇಡೀ ಮೌಂಟ್ ಅಬೂವಿನ ಒಂದು ಸುಂದರ ದೃಶ್ಯವನ್ನು ನೋಡಬಹುದು. ಉಳಿದ ದೇವಸ್ಥಾನಗಳೆಂದರೆ ಅಚಲಘರ್ ಎನ್ನುವ ಚಿತ್ರಕೋಟೆಯಲ್ಲಿರುವ ಶಿವನ ದೇವಸ್ಥಾನ, ಸ್ವಾಮಿ ರಮಾನಂದರಿಂದ ಸ್ಥಾಪಿಸಲ್ಪಟ್ಟ ಶ್ರೀರಾಮರ ದೇವಸ್ಥಾನ ಹಾಗೂ ಅಂಬಾಮಾತಾ ದೇವಸ್ಥಾನ.

ರಾಜಾಸ್ಥಾನದ ಒಂದು ವಿಶೇಷವೆಂದರೆ ಇಲ್ಲಿನ ಜೈನ ಮಂದಿರಗಳು. ಕಣ್ಣಾರೆ ನೋಡಿದ ಹೊರತು ಕರ್ನಾಟಕದ ಬಹುತೇಕ ಮಂದಿಗೆ ಇದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಇವುಗಳನ್ನು ನೋಡಿದಾಗ ಇಂತಹ ಕಲಾತ್ಮಕ ದೇವಾಲಯಗಳನ್ನು ನಮ್ಮ ಭಾರತೀಯರು ಕಲ್ಪಿಸಿಕೊಂಡು ಕಟ್ಟಿದರೇ ಎಂದು ವಿಸ್ಮಯವಾಗುತ್ತದೆ. ಶಿಲ್ಪಕಲೆಯಲ್ಲಿ ಭಾರತದ ಶಿಲ್ಪಿಗಳು ಏನನ್ನೆಲ್ಲಾ ಸಾಧಿಸಿದ್ದಾರೆನ್ನುವುದನ್ನು ಎತ್ತಿತೋರಿಸುವ ಕಲಾತ್ಮಕ ದೇವಸ್ಥಾನಗಳು ಇವು. ನಮ್ಮ ದೇಶದ ಹಿರಿಯ ಪತ್ರಕರ್ತ ಎಂ.ವಿ. ಕಾಮತ್ ಎಂಬುವರು ಈ ದೇವಸ್ಥಾನಗಳ ಬಗ್ಗೆ ಹೀಗೆ ಬರೆದಿದ್ದಾರೆ: "ರೇಣಕಪುರ ಮತ್ತು ದೆಲ್ವಾರಾಗಳಲ್ಲಿರುವ ಕಟ್ಟಡಗಳಿಗೆ ಸಮಾನವಾದುದು ಪ್ರಪಂಚದಲ್ಲೆಲ್ಲೂ ದೊರೆಯುವುದಿಲ್ಲ. ಸುತ್ತಲೂ ಪರ್ವತಗಳು, ಅವುಗಳ ಮಧ್ಯೆ ಅನರ್ಘ್ಯರತ್ನದಂತೆ ಕಂಗೊಳಿಸುತ್ತಿವೆ. ಎಲ್ಲ ಸೌಂದರ್ಯವನ್ನೂ ಎಲ್ಲ ಪ್ರಶಂಸೆಗಳನ್ನೂ ಮೀರಿದ ಸೌಂದರ್ಯ ಅವುಗಳದು. " ಅಮೆರಿಕದ ಡಾ. ಜಾನ್ ಜೆ. ಬ್ರಾಜ್ದಾ ( Brazda) ಎನ್ನುವರು ಬರೆಯುತ್ತಾರೆ : "ನಿನ್ನೆ ದೆಲ್ವಾರಾ, ಇಂದು ರೇಣಕಪುರ – ಸೌಂದರ್ಯವನ್ನೂ ಗಾಂಭೀರ್ಯವನ್ನೂ ಶ್ರೇಷ್ಠಕಲೆಯನ್ನೂ ಪ್ರೀತಿಸುವವನು ಪ್ರಪಂಚದಲ್ಲಿ ಇವುಗಳನ್ನಲ್ಲದೆ ಇನ್ನೇನು ತಾನೆ ಬಯಸಬಲ್ಲ?" ಇವರೀರ್ವರ ಹೇಳಿಕೆಯಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ.

ಕಲೆಯಲ್ಲಿ ಇದು ಪ್ರಪಂಚದಲ್ಲೆಲ್ಲ ಪ್ರಸಿದ್ಧವಾದದ್ದು. ರಾಜಾಸ್ಥಾನ ಅಮೃತಶಿಲೆಗೆ ಪ್ರಸಿದ್ಧವಾದುದರಿಂದ ನಮ್ಮ ದೇಶದ ಶಿಲ್ಪಿಗಳು ಈ ಕಲ್ಲಿನಲ್ಲಿ ಎಲ್ಲ ವಿಧವಾದ ಚಮತ್ಕಾರವನ್ನು ತೋರಿಸಿ ತಮ್ಮ ಕುಶಲತೆಯ ಪ್ರದರ್ಶನವನ್ನು ಸಂಪೂರ್ಣವಾಗಿ ಪ್ರಕಟಿಸಿದ್ದಾರೆ. ದೆಲ್ವಾರಾ ದೇವಸ್ಥಾನ ಮೌಂಟ್ ಅಬೂ ಇಂದ ಮೂರು ಕಿ.ಮೀ. ದೂರದಲ್ಲಿದೆ. ಎಲ್ಲ ಕಡೆಯೂ ಪರ್ವತಗಳಿಂದ ಆವರಿಸಲ್ಪಟ್ಟಿದೆ. ಇದೊಂದು ಪ್ರಸಿದ್ಧ ಜೈನಮಂದಿರ. ಈ ದೇವಸ್ಥಾನದ ಸೌಂದರ್ಯ ಅದ್ವಿತೀಯವಾದುದು. ಜೊತೆಗೆ ಆಧ್ಯಾತ್ಮಿಕ ಕೇಂದ್ರ. ಇದು ೧೧-೧೨ನೇ ಶತಮಾನದಲ್ಲಿ ಕಟ್ಟಲ್ಪಟ್ಟದ್ದು. ಇಲ್ಲಿ ಶ್ವೇತಾಂಬರ ಜೈನರಿಗೆ ಸೇರಿದ ಐದು ದೇವಸ್ಥಾನಗಳಿವೆ: ಅವುಗಳೇ ವಿಮಲ ವಸಹಿ, ಲೂನ್ ವಸಹಿ, ಋಷಭ ದಿಯೋಜಿ, ಪಾರ್ಶ್ವನಾಥಜಿ ಮತ್ತು ಮಹಾವೀರ ಸ್ವಾಮಿ. ಈ ಐದು ದೇವಸ್ಥಾನಗಳಲ್ಲಿ ಮೊದಲನೆಯ ದೇವಸ್ಥಾನವು ಕ್ರಿ.ಶ. ೧೦೩೧ರಲ್ಲಿ ಕಟ್ಟಲ್ಪಟ್ಟಿತು. ೨೪ ತೀರ್ಥಂಕರರಲ್ಲಿ ಮೊದಲನೆಯವರಾದ ಆದಿನಾಥರಿಗೆ ಇದು ಅರ್ಪಿಸಲ್ಪಟ್ಟಿತು. ಆದುದರಿಂದಲೇ ಇದನ್ನು ಆದಿನಾಥ ದೇವಸ್ಥಾನ ಎಂದೂ ಕರೆಯುತ್ತಾರೆ. ೧೫೦೦ ಶಿಲ್ಪಿಗಳು ಹಾಗೂ ೧೨೦೦ ಕೆಲಸಗಾರರು



ಪಾರ್ಶ್ವನಾಥ ಮಂದಿರ

೧೪ ವರ್ಷಗಳ ಕಾಲ ಸತತವಾಗಿ ಕೆಲಸಮಾಡಿ ಈ ದೇವಸ್ಥಾನವನ್ನು ಕಟ್ಟಿದರು. ಗರ್ಭಗುಡಿಯ ಮುಂದೆ ಕೆತ್ತನೆಯ ಕೆಲಸದಿಂದ ತುಂಬಿರುವ ೪೮ ಮನೋಹರ ಕಂಬಗಳಿವೆ. ನಾಲ್ಕೂ ಗೋಡೆಗಳಲ್ಲಿ ಸುಂದರವಾದ ೨೪ ಪುಟ್ಟ ದೇವಸ್ಥಾನಗಳು ೨೪ ತೀರ್ಥಂಕರರ ವಿಗ್ರಹದೊಂದಿಗೆ ರಾರಾಜಿಸುತ್ತಿವೆ.

ಎರಡನೆಯ ದೇವಸ್ಥಾನ ಲೂನ್ ವಸಾಹಿ. ಇದು ಮೊದಲ ದೇವಸ್ಥಾನ ಕಟ್ಟಿ ಮುಗಿಸಿದ ೨೦೦ ವರ್ಷಗಳ ಅನಂತರ ಅಂದರೆ ೧೨೩೧ರಲ್ಲಿ ರಾಜಾ ವಿರಾಧವಲೆರ್‌ನ ಮಂತ್ರಿಗಳಾದ ವಸುಪಾಲ್ ಮತ್ತು ತೇಜ್‌ಪಾಲ್‌ರಿಂದ ಕಟ್ಟಲ್ಪಟ್ಟಿತು. ಇವರಿಬ್ಬರೂ ಸಹೋದರರು. ಇದನ್ನು ಅವರು ತಮ್ಮ ಅಣ್ಣ ಲೂನ್ ವಸಾಹಿಯ ಜ್ಞಾಪಕಾರ್ಥ ಕಟ್ಟಿದರು. ಇದು ಮೊದಲನೆಯ ದೇವಸ್ಥಾನಕ್ಕಿಂತ ಚಿಕ್ಕದಾಗಿದೆ. ಆದರೆ ಇದರ ಕೆತ್ತನೆಯ ಕೆಲಸ ಮೊದಲ ದೇವಸ್ಥಾನಕ್ಕಿಂತ ತುಂಬ ಸುಂದರವಾಗಿದೆ. ಇದೇ ರೀತಿ ಉಳಿದ ಮೂರೂ ದೇವಸ್ಥಾನಗಳು ಬೇರೆ ಬೇರೆಯವರಿಂದ ಬೇರೆ ಬೇರೆ ಕಾಲದಲ್ಲಿ ಕಟ್ಟಲ್ಪಟ್ಟವು. ಒಂದೊಂದೂ ಮತ್ತೊಂದನ್ನು ಮೀರಿಸುವ ಕಲೆಯಿಂದ ಕೂಡಿದೆ. ಈ ದೇವಸ್ಥಾನಗಳ ಇನ್ನೊಂದು ವಿಶೇಷವೆಂದರೆ ಹಲವಾರು ಕೃಷ್ಣನ ವಿಗ್ರಹಗಳೂ ಕೆತ್ತಲ್ಪಟ್ಟಿವೆ. ಕಾಳಿಯ ಮರ್ದನ ಕೃಷ್ಣ, ಗೋಪಿಯರೊಡನೆ ಆಟವಾಡುತ್ತಿರುವ ಕೃಷ್ಣ, ಕೊಳಲನ್ನೂದುತ್ತಿರುವ ಕೃಷ್ಣ ಇವುಗಳೆಲ್ಲಾ ಅತ್ಯಂತ ಸುಂದರವಾಗಿವೆ. ತಲೆ ಎತ್ತಿ ಮೇಲಿನ ಗೋಡೆ ನೋಡಿದರೆ ವೃತ್ತಾಕಾರವಾಗಿ ಕೆತ್ತಿರುವ ದೇವಿಯರ ವಿಗ್ರಹವನ್ನು ಎಷ್ಟು ನೋಡಿದರೂ ಮನ ತಣಿಯದು. ಬಿಳಿ ಅಮೃತಶಿಲೆಯ ಆನೆಗಳು ಕಂಬಗಳನ್ನು ಹೊತ್ತುನಿಂತಿರುವ ದೃಶ್ಯ ಮನ ಸೆಳೆಯುವಂಥದ್ದು. ಅವುಗಳನ್ನು ನಾನು ಎಷ್ಟು ಹೊತ್ತು ನೋಡಿದೆನೆಂದರೆ ನೋವಿನಿಂದ ಕತ್ತು ಊದಿಕೊಂಡಿತ್ತು!

ಇಲ್ಲಿಂದ ಸುಮಾರು ೧೨೦ ಕಿ.ಮೀ. ದೂರ ಪ್ರಯಾಣ ಮಾಡಿ ಪಾವಾಪುರಿ ಎನ್ನುವ ಮತ್ತೊಂದು ಜೈನರ ದೇವಸ್ಥಾನಕ್ಕೆ ಹೋದೆವು. ಇದು ಸುಮಾರು ೧೦೦ ಎಕರೆ ಪ್ರದೇಶದಲ್ಲಿ ಕಾಡಿನ ಮಧ್ಯೆ ಕಟ್ಟಿರುವ ದೇವಸ್ಥಾನ. ಎಲ್ಲ ಬಹಳ ಅಚ್ಚುಕಟ್ಟು. ಒಬ್ಬರು ಜೈನ ಮುನಿಗಳು ಇಲ್ಲಿ ಚಾತುರ್ಮಾಸ್ಯ ಮಾಡುತ್ತಿದ್ದುದರಿಂದ ಪರಿಸರಕ್ಕೆ ವಿಶೇಷ ಕಳೆ ಕಟ್ಟಿತ್ತು. ಸುಮಾರು ೧೦೦೦೦ ಜೈನ ಮುನಿಗಳು (ಗಂಡಸರು ಹಾಗೂ ಹೆಂಗಸರು, ಎಲ್ಲರೂ ಸಂನ್ಯಾಸಿಗಳೇ, ಆದರೆ ಅವರ ಧರ್ಮದ ಪ್ರಕಾರ ಬಿಳಿ ಬಟ್ಟೆ ಧರಿಸಿದ್ದರು) ದೇಶದ ಹಲವಾರು ಭಾಗಗಳಿಂದ ಬಂದು ಇವರ ಜೊತೆಯಲ್ಲೇ ಇದ್ದು ಚಾತುರ್ಮಾಸ್ಯ ಮಾಡುತ್ತಿದ್ದರು. ಸಾವಿರಾರು ಜನ ಭಕ್ತರು ಬಂದು ಹೋಗುತ್ತಿದ್ದರು. ಎಲ್ಲರಿಗೂ ಅಚ್ಚುಕಟ್ಟಾಗಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಎಲ್ಲೂ ಕೊಳಕಿಲ್ಲದೆ, ಶುದ್ಧವಾಗಿ ನಿಶ್ಶಬ್ದವಾಗಿ, ಆಧುನಿಕ ರೀತಿಯ ವ್ಯವಸ್ಥೆ. ಹಿಂದೂ ದೇವಾಲಯದ ಅಧಿಕಾರಿಗಳು ಒಮ್ಮೆ ಇಂತಹ ಸ್ಥಳಕ್ಕೆ ಭೇಟಿಕೊಟ್ಟರೆ, ಎಷ್ಟೋ ಸುಧಾರಣೆಯಾಗಬಹುದು. ಈ ದೇವಸ್ಥಾನದ ಮತ್ತೊಂದು ವಿಶೇಷವೆಂದರೆ ಸಾವಿರಾರು ಹಸುಗಳಿರುವ ಗೋಶಾಲೆ. ಎಲ್ಲಾ ಹಸುಗಳೂ ಸ್ವೇಚ್ಛೆಯಿಂದ ಜಮೀನಿನಲ್ಲಿ ಮೇಯುತ್ತಿರುವುದನ್ನು ನೋಡಿ ಆನಂದವಾಗುತ್ತದೆ. ಕೋಟ್ಯಂತರ ರೂಪಾಯಿಗಳ ಈ ಕಾರ್ಯವೆಲ್ಲಾ ಇಂತಹ ಕಾಡಿನ ಮಧ್ಯೆ ಹೇಗೆ ನಡೆಯುತ್ತಿದೆ ಎಂದು ಪ್ರಶ್ನಿಸಿದ್ದಕ್ಕೆ ದೇವರ ಅನುಗ್ರಹ, ಭಕ್ತರ ಸಹಕಾರ ಎಂದು ಉತ್ತರ ಬಂತು.

ಇದನ್ನೆಲ್ಲಾ ನೋಡಿ ಮೂಕರಾಗಿ ಉದಯಪುರದತ್ತ ಸಾಗುತ್ತಾ ಫಲನಾ ಎಂಬ ಊರಿನಲ್ಲಿ ವಿಶ್ರಾಂತಿ ಪಡೆದು, ಮುಂದು ವರಿಯುತ್ತಿದ್ದೆವು. ಬಹುಶಃ ಉದಯಪುರದವರೆಗೆ ಏನೂ ವಿಶೇಷವಿಲ್ಲವೇನೋ ಎಂದುಕೊಂಡಿದ್ದೆವು. ಆದರೆ ಸುಮಾರು ೫೫ ಕಿ.ಮೀ. ಪ್ರಯಾಣ ಮಾಡುವಷ್ಟರಲ್ಲಿ ರೇಣಕಪುರ್ ಎನ್ನುವ ಮತ್ತೊಂದು ಜೈನಕ್ಷೇತ್ರವನ್ನು ತಲುಪಿದೆವು. ಆ ದೇವಸ್ಥಾನವೇ ಒಂದು ಊರಿನಂತೆ ದೂರದಿಂದ ಕಂಡಿತು. ಅದು ಪರ್ವತದ ತಪ್ಪಲಿನಲ್ಲಿದೆ. ಋಷಭದೇವನ ಹೆಸರಿನಲ್ಲಿ ಕಟ್ಟಿರುವ ಚತುರ್ಮುಖ ಜೈನ ದೇವಸ್ಥಾನವಿದು. ೧೪೪೬ರಲ್ಲಿ ಸುಮಾರು ೫೦ ವರ್ಷಗಳು ಸತತವಾಗಿ ಸಾವಿರಾರು ಶಿಲ್ಪಿಗಳು ಸೇರಿ ಕಟ್ಟಿರುವ ದೇವಸ್ಥಾನ. ಇದಕ್ಕೆ ಎಷ್ಟು ಖರ್ಚಾಗಿದೆ ಎಂದು ಅಂದಾಜು ಮಾಡಲೂ ಆಗುವುದಿಲ್ಲ. ಈ ಕಲಾಕೃತಿಯನ್ನು ವರ್ಣಿಸುವುದು ಅತಿ ಕಷ್ಟ. ಇದು ಬೇರೆ ಜೈನ ದೇವಸ್ಥಾನಗಳಿಗಿಂತ ವಿಶಿಷ್ಟವಾಗಿದೆ. ನಾಗ ಮರ್ದನದ ಒಂದು ದೃಶ್ಯವಿದೆ. ಇದು ಒಂದೇ ಕಲ್ಲಿನಿಂದ ಕೆತ್ತಲ್ಪಟ್ಟಿರುವುದು. ತಲೆಯನ್ನು ಮೇಲೆತ್ತಿ ನೋಡಬೇಕು. ಈ ದೇವಸ್ಥಾನದಲ್ಲಿ ಸುಂದರವಾಗಿ ಕೆತ್ತಿರುವ ೧೪೦ ಅಮೃತ ಶಿಲೆಯ ಕಂಬಗಳಿವೆ. ವಿಶಾಲವಾದ ಹಾಲಿನಲ್ಲಿ ಈ ಕಂಬಗಳು ದೇವಸ್ಥಾನಕ್ಕೆ ಆಧಾರವಾಗಿ ನಿಂತಿವೆ. ನಾಲ್ಕೂ ಗೋಡೆಗಳಲ್ಲಿ ತೀರ್ಥಂಕರರ



ಲೂನ್ ವಸಾಹಿಯ ಸುಂದರ ಶಿಲ್ಪಕೃತಿ

ದೇವಸ್ಥಾನಗಳನ್ನು ಹೇಗೆ ಜೋಡಿಸಿದ್ದಾರೆಂದರೆ, ನೀವು ಯಾವುದೇ ನಾಲ್ಕು ಕಂಬಗಳ ಮಧ್ಯೆ ನಿಂತರೆ ನಿಮ್ಮ ಹಿಂದೆ, ಮುಂದೆ, ಎಡ ಬಲಗಳಲ್ಲಿ ದೇವಸ್ಥಾನಗಳನ್ನು ಕಾಣಬಹುದು. ಇದು ಇಲ್ಲಿಯ ವಿಶೇಷ.


ಇಲ್ಲಿಂದ ಸುಮಾರು ೧೫ ಕಿ.ಮೀ ದೂರದಲ್ಲಿರು ಪರಶುರಾಮನ ದೇವಸ್ಥಾನ ತಲುಪಿದೆವು. ಈ ದೇವಸ್ಥಾನ ಒಂದು ಪುಟ್ಟ ಬೆಟ್ಟದ ಮೇಲಿದೆ. ಚಿಕ್ಕ ಜಲಪಾತವೂ ಇದೆ. ಇದು ಪರಶುರಾಮನು ತಪಸ್ಸು ಮಾಡಿದ ಸ್ಥಳವೆಂದೂ ಇಲ್ಲಿ ಅವನಿಗೆ ಶಿವನ ದರ್ಶನವಾಯಿತೆಂದೂ ಪ್ರತೀತಿ. ಜೈನ ದೇವಸ್ಥಾನಗಳ ಶುದ್ಧತೆಯನ್ನೂ, ಆಧುನೀಕರಣವನ್ನೂ ನೋಡಿದಮೇಲೆ, ಅಶುದ್ಧ ಪರಿಸರದ, ಕೂಗಾಟದಿಂದ ತುಂಬಿದ್ದ ಈ ಸ್ಥಳ ಏನೇನೂ ಆಕರ್ಷಕವಾಗಿರಲಿಲ್ಲ. ಸುಮಾರು ೪೫೦ ಮೆಟ್ಟಿಲುಗಳನ್ನು ಶಿವನ ನಾಮಸ್ಮರಣೆ ಮಾಡುತ್ತಾ ಹತ್ತಿ, ಅವನ ದರ್ಶನ ಪಡೆದು ಹಿಂದಿರುಗಿದೆವು.

ಉದಯಪುರದತ್ತ ಪ್ರಯಾಣ ಸಾಗಿತು. ಮಾರ್ಗಮಧ್ಯದಲ್ಲಿ ಚಾರ್‌ಭುಜ ಎನ್ನುವ ವಿಷ್ಣುವಿನ ದೇವಸ್ಥಾನವನ್ನೂ ಏಕಲಿಂಗ ಎನ್ನುವ ಶಿವನ ದೇವಸ್ಥಾನವನ್ನೂ ನೋಡಿದೆವು. ಈ ಮಧ್ಯೆ ಒಂದು ಕುತೂಹಲಕರ ಘಟನೆ ಸಂಭವಿಸಿತು. ನಮ್ಮ ಸ್ನೇಹಿತರು ಹೋಟೆಲಿನ ಬೀಗದ ಕೈ ಮರೆತು ತಮ್ಮೊಡನೆ ತಂದಿದ್ದರು. ಅದನ್ನು ಹೇಗೆ ಹಿಂತಿರುಗಿಸುವುದು ಎಂದು ಯೋಚಿಸುತ್ತಿದ್ದಾಗ, ಎದುರುಗಡೆಯಿಂದ ಬರುತ್ತಿದ್ದ ಒಂದು ಕಾರನ್ನು ನಮ್ಮ ಡ್ರೈವರು ನಿಲ್ಲಿಸಿದ. ಪರಿಸ್ಥಿತಿಯನ್ನು ವಿವರಿಸಿ, ತಾವು ಅತ್ತ ಹೋಗುತ್ತಿದ್ದೀರಲ್ಲಾ, ಇದನ್ನು ಆ ಹೋಟೆಲಿಗೆ ತಲುಪಿಸಲು ಸಾಧ್ಯವೇ ಎಂದು ಕೇಳಿದಾಗ, ಅವರು ತಕ್ಷಣ ಒಪ್ಪಿಕೊಂಡರು. ಅಷ್ಟೇ ಅಲ್ಲ, ನಮ್ಮ ಸ್ನೇಹಿತರ ಮೊಬೈಲ್ ನಂಬರನ್ನು ಕೇಳಿದರು. ಯಾಕೆ ಅಂದದ್ದಕ್ಕೆ "ಅವರಿಗೆ ತಲುಪಿಸಿದ ತಕ್ಷಣ, ನಿಮಗೆ ವಿಷಯ ತಿಳಿಸುತ್ತೇನೆ" ಎಂದರು. ಎಂತಹ ಸಜ್ಜನರ ಭೇಟಿಯಾಯಿತು ಎಂಬ ಆನಂದ ಒಂದೆಡೆಯಾದರೆ, ಇಂತಹ ಉಪಕರಣ ಹೇಗೆ ಸಹಾಯಕವಾಗುತ್ತದೆ ಎಂಬುದೂ ಮನದಟ್ಟಾಯಿತು. ಅವರಿಗೆ ಧನ್ಯವಾದವನ್ನು ತಿಳಿಸಿ, ಪ್ರಯಾಣವನ್ನು ಮುಂದುವರಿಸಿ ಉದಯಪುರವನ್ನು ತಲುಪಿದೆವು.

ಉದಯಪುರ ೧೫೫೯ರಲ್ಲಿ ರಾಜಾ ಉದಯಸಿಂಗನಿಂದ ನಿರ್ಮಿತಗೊಂಡಿದ್ದು, ಅವನ ಹೆಸರನ್ನೇ ಊರಿಗೆ ಇಡಲಾಗಿದೆ. ಇದು ಒಂದು ಸರೋವರಗಳ ನಗರ. ಇಲ್ಲಿನ ಜಗದೀಶ ದೇವಸ್ಥಾನ ಅತಿ ಪ್ರಸಿದ್ಧವಾದುದು. ಒಂದೂವರೆ ಕೋಟಿ ಖರ್ಚಿನಲ್ಲಿ ೧೬೫೧ನೆಯ ಇಸವಿಯಲ್ಲಿ ಮಹಾರಾಣಾ ಜಗತ್‌ಸಿಂಗನಿಂದ ಕಟ್ಟಲ್ಪಟ್ಟಿದ್ದು. ಇನ್ನೊಂದು ಅತ್ಯಂತ ಆಕರ್ಷಣೆಯ ಸ್ಥಳವೆಂದರೆ, ಒಂದು ಗುಡ್ಡದ ಮೇಲೆ ಕುದುರೆಯ ಮೇಲೆ ಠೀವಿಯಿಂದ ಕುಳಿತಿರುವ ರಾಣಾಪ್ರತಾಪ್‌ಸಿಂಗನ ಲೋಹದ ವಿಗ್ರಹ. ೧೯ನೆಯ ಶತಮಾನದಲ್ಲಿ ಸ್ವಾಮಿ ವಿವೇಕಾನಂದರು ಭಾರತೀಯರಿಂದ ಯಾವ ಸ್ವಾಭಿಮಾನ ಹಾಗೂ ದೇಶಪ್ರೇಮವನ್ನು ಆಶಿಸಿದರೋ ಅದು ೧೬ನೆಯ ಶತಮಾನದಲ್ಲಿ ಇವನಲ್ಲೂ ಇವನ ಕುದುರೆಯಲ್ಲೂ ಪೂರ್ಣವಾಗಿ ಅಭಿವ್ಯಕ್ತವಾಗಿತ್ತು. ಅಕಬರ್ ಇವನೊಡನೆ ಸಂಧಿ ಮಾಡಿಕೊಳ್ಳಲು ೪ ಬಾರಿ ಯತ್ನಿಸಿ ವಿಫಲನಾದನು. ಅನಂತರ ಆಕ್ರಮಣದ ಯೋಜನೆ ಹೂಡಿದನು. ಹಲವು ಬಾರಿ ಘೋರ ಯುದ್ಧ ನಡೆಯಿತು. ಅಲ್ಪ ಸೈನ್ಯದ ಸಹಾಯದಿಂದಲೇ ಮೊಗಲರನ್ನು ಧೈರ್ಯವಾಗಿ ಎದುರಿಸಿ ಕೊನೆಗೆ ವೀರ ಮರಣ ಪಡೆದನು. ಅಕಬರ್ ಜಯ ಪಡೆಯಲು ಸುಮಾರು ೨೦ ವರ್ಷ ಸೆಣೆಸಾಡಬೇಕಾಯಿತು ಮತ್ತು ಅವನ ಸೈನ್ಯದ ಬಹುದೊಡ್ಡ ಭಾಗ ನಾಶವಾಗಬೇಕಾಯಿತು.

ಮಹಾರಾಣಾ ಪ್ರತಾಪನ ಕುದುರೆ ಚೇತಕ್ ಅವನಷ್ಟೇ ಸ್ವಾಭಿಮಾನಿ ಹಾಗೂ ದೇಶಭಕ್ತಿಯನ್ನು ಹೊಂದಿದ್ದಾಗಿತ್ತು. ಅರಬ ದೇಶದ ಒಬ್ಬ ಕುದುರೆ ವ್ಯಾಪಾರಿಯಿಂದ ಅದನ್ನು ಕೊಂಡುಕೊಳ್ಳಲಾಗಿತ್ತು. ಆ ವ್ಯಾಪಾರಿ ಅದಕ್ಕೆ ಅಪಾರ ಬೆಲೆ ಬೇಡಿದಾಗ, ರಾಣಾ ಪ್ರತಾಪ್ ಏಕೆ ಅಷ್ಟು ಬೆಲೆ ಎಂದು ಕೇಳಿದ್ದ. ಅದಕ್ಕೆ ಆ ವ್ಯಾಪಾರಿ, "ಇದು ನಿಮ್ಮನ್ನು ಕೊನೆಯವರೆಗೂ ಕಾಪಾಡುತ್ತದೆ, ಅಷ್ಟೇ ಅಲ್ಲ, ಯುದ್ಧದಲ್ಲಿ ಶೌರ್ಯದಿಂದ ಹೋರಾಡುತ್ತದೆ" ಎಂದಿದ್ದ. ಅದು ನಿಜವಾಗಿತ್ತು. ಅಕ್ಬರನ ಸೇನಾಧಿಪತಿ ಮಾನಸಿಂಗನಿಗೂ ರಾಣಾ ಪ್ರತಾಪನಿಗೂ ಘೋರಯುದ್ಧ ನಡೆದಾಗ, ಚೇತಕ್ ಆನೆಯಮೇಲೆ ಕುಳಿತಿದ್ದ ಮಾನಸಿಂಗನ ಮೇಲೆ ಎರಡೂ ಕಾಲುಗಳನ್ನು ಮೇಲೆತ್ತಿ ಆನೆಯ ತಲೆಯ ಮೇಲೆ ಜೋರಾಗಿ ಹೊಡೆಯಿತು. ಆನೆ ತತ್ತರಿಸಿತು. ಮಾನಸಿಂಗ್ ಕೋಪಗೊಂಡು ಕತ್ತಿಯಿಂದ ಕುದುರೆಯ ಒಂದು ಕಾಲನ್ನು ಕತ್ತರಿಸಿದ. ರಾಣಾ ಪ್ರತಾಪನ ಸುತ್ತ ಸೈನ್ಯ ಆವರಿಸುತ್ತಿರುವುದನ್ನು ನೋಡಿ, ಮೂರು ಕಾಲಿನಿಂದಲೇ ಸಾಧ್ಯವಾದಷ್ಟು ವೇಗವಾಗಿ ಓಡಿ ಒಂದು ನಿರ್ಜನ ಪ್ರದೇಶದಲ್ಲಿ ನಿಂತಿತು. ಕೊನೆಗೆ ರಾಣಾ ಪ್ರತಾಪನ ತೊಡೆಯ ಮೇಲೆ ಮುಖವಿಟ್ಟು, ಅಸು ನೀಗಿತು. ರಾಣಾ ಪ್ರತಾಪನಿಗಿದ್ದ ದೇಶಾಭಿಮಾನ ನಮ್ಮ ಭಾರತೀಯರಲ್ಲಿ ಜಾಗೃತವಾಗದಿದ್ದರೆ ನಮ್ಮ ದೇಶವನ್ನು ಅಭಿವೃದ್ಧ ರಾಷ್ಟ್ರವನ್ನಾಗಿ ಮಾಡಲು ಸಾಧ್ಯವಿಲ್ಲ.

ಉದಯಪುರದ ಇನ್ನೊಂದು ವಿಶೇಷವೆಂದರೆ ಬೊಂಬೆಯಾಟ ಹಾಗೂ ಜಾನಪದ ನೃತ್ಯ. ಪ್ರವಾಸಿಗಳಿಗೆ ಇವುಗಳ ಪರಿಚಯ ಮಾಡಿಕೊಡಲು "ಭಾರತೀಯ ಲೋಕಕಲಾ ಮಂಡಲ" ಎನ್ನುವ ಒಂದು ಸಂಸ್ಥೆ ಪ್ರತಿದಿನ ಸಂಜೆ ಇವೆರಡನ್ನೂ ಸೇರಿಸಿ ಒಂದು ಗಂಟೆಯ ಕಾರ್ಯಕ್ರಮವನ್ನು ಪ್ರದರ್ಶಿಸುತ್ತದೆ. ರಾಜಾಸ್ಥಾನದ ಪ್ರಸಿದ್ಧವಾದ ವರ್ಣಮಯ ಉಡುಪುಗಳನ್ನು ಗೊಂಬೆಗಳಿಗೆ ತೊಡಿಸಿ, ಚರಿತ್ರೆಯ ಹಲವಾರು ಘಟನೆಗಳನ್ನು ಸೂತ್ರಗಳ ಸಹಾಯದಿಂದ ಗೊಂಬೆಗಳ ಕೈಯಲ್ಲಿ ಆಡಿಸುತ್ತಾರೆ. ನೃತ್ಯ ಕಾರ್ಯಕ್ರಮದಲ್ಲಿ ಒಂದರ ಮೇಲೆ ಒಂದರಂತೆ ನಿಧಾನವಾಗಿ ಹನ್ನೆರಡು ವರ್ಣಮಯ ಗಡಿಗೆಗಳನ್ನು ತಲೆಯ ಮೇಲಿಟ್ಟುಕೊಂಡು, ಅದನ್ನು ಬ್ಯಾಲೆನ್ಸ್ ಮಾಡಿಕೊಂಡು, ತಟ್ಟೆಯ ಮೇಲೆ, ಗಾಜಿನ ಹರಳುಗಳ ಮೇಲೆ ಸುಂದರವಾಗಿ ಸಂಗೀತಕ್ಕೆ ತಕ್ಕಂತೆ ಸುಮಾರು ೧೫ ನಿಮಿಷ ನೃತ್ಯ ಪ್ರದರ್ಶನ ಮಾಡಿ ತೋರಿಸುತ್ತಾರೆ.



ಅಜ್ಮೀರ್‌ನ ದರ್ಗಾ

ಉದಯಪುರದಿಂದ ಅಜ್ಮೀರದತ್ತ ಪ್ರಯಾಣ ಬೆಳೆಸಿದೆವು. ಆರಾವಳಿ ಪರ್ವತಗಳಿಂದ ಸುತ್ತುವರೆದಿರುವ ಈ ಊರು ಅಜಯಮೇರು ಎಂಬ ಹೆಸರಿದ್ದುದ್ದು ಈಗ ಇದು ಅಜ್ಮೀರ್ ಆಗಿದೆ. ಇಲ್ಲಿ ಮುಸಲ್ಮಾನರ ದರ್ಗಾಗಳು ಒಂದು ಕಡೆಯಾದರೆ ಹಿಂದೂ ಪವಿತ್ರ ದೇವಸ್ಥಾನಗಳು ಮತ್ತೊಂದೆಡೆ. ಎರಡು ಧಾರ್ಮಿಕಪಂಗಡಗಳ ಸಾಮರಸ್ಯ ಬದುಕನ್ನು ಮೇಲ್ನೋಟಕ್ಕಾದರೂ ಇಲ್ಲಿ ಕಾಣಬಹುದು.

ಅಜ್ಮೀರ್‌ನ ದರ್ಗಾ ವಿಶ್ವವಿಖ್ಯಾತವಾದುದು. ಇಲ್ಲಿ ಮುಸ್ಲಿಮರೇ ಹೆಚ್ಚು ಬರುವುದಾದರೂ ಎಲ್ಲಾ ಮತೀಯರಿಗೂ ಸ್ವಾಗತ ಉಂಟು. ಇಲ್ಲಿ ಏನು ಪ್ರಾರ್ಥಿಸಿಕೊಂಡರೂ ನೆರವೇರುವುದೆಂಬ ನಂಬಿಕೆ ದೃಢವಾಗಿರುವುದು. ಎಲ್ಲ ಮತೀಯರೂ ದೂರ ದೂರದಿಂದ ಬರುತ್ತಾರೆ. ಎರಡು ವರ್ಷಗಳ ಹಿಂದೆ ಬೆಂಗಳೂರಿನಿಂದ ರಾಮಕೃಷ್ಣರ ಒಬ್ಬ ಮಹಿಳಾ ಭಕ್ತರು, ತಮ್ಮ ಮಗುವಿಗೆ ಆರೋಗ್ಯ ಸರಿ ಇಲ್ಲದಿರುವಾಗ, ಇಲ್ಲಿಗೆ ಹರಕೆ ಹೊತ್ತುಕೊಂಡು ಬಂದಿದ್ದರು. ವೈದ್ಯರ ನಿಪುಣತೆಯಿಂದಲೋ, ಹಜರತ್ ಖ್ವಾಜಾ ಮೊಯಿನುದ್ದೀನ್ ಹಸನ್ ಚಿಸ್ತಿಯ ಅನುಗ್ರಹದಿಂದಲೋ ಮಗುವಿಗೆ ಗುಣವಾಗಿತ್ತು. ಆಕೆಯಿಂದ ಈ ದರ್ಗಾದ ಬಗ್ಗೆ ಕೇಳಿದ್ದೆ. ಇಲ್ಲಿಗೆ ಬಂದಮೇಲೆ, ಚಿಸ್ತಿಯು ದೊಡ್ಡ ಸೂಫಿ ಸಂತನಾಗಿದ್ದನೆಂಬುದು ತಿಳಿಯಿತು. ಇವನೊಬ್ಬ ದೊಡ್ಡ ಸಂತನಾಗಿದ್ದುದರಿಂದಲೂ, ಮತೀಯ ಭಾವನೆ ಇಲ್ಲದೆ ವಿಶಾಲ ಹೃದಯಿಯಾಗಿದ್ದುದರಿಂದಲೂ, ಬಡವರನ್ನು ಪ್ರೀತಿಯಿಂದ ಕಾಣುತ್ತಿದ್ದುದರಿಂದಲೂ ಈ ಸೂಫಿಯ ಜೀವನ ಹಾಗೂ ಸಂದೇಶದ ಬಗ್ಗೆ ಸ್ವಲ್ಪ ತಿಳಿಯೋಣ.

ಪೂರ್ವ ಪರ್ಷಿಯಾದ ಸೆಯಿಸ್ತಾನ್‌ನಲ್ಲಿ ೧೧೩೮-೩೯ರಲ್ಲಿ ಹಜ್ರತ್ ಖ್ವಾಜಾ ಮೊಯಿನುದ್ದೀನ್ ಚಿಸ್ತಿಯ ಜನ್ಮವಾಯಿತು. ತನ್ನ ೧೫ನೆಯ ವಯಸ್ಸಿನಲ್ಲಿ ತಂದೆತಾಯಿಯರನ್ನು ಕಳೆದುಕೊಂಡನು. ಅವನು ತನ್ನ ತಂದೆ ಬಿಟ್ಟಿದ್ದ ಒಂದು ದೊಡ್ಡ ದ್ರಾಕ್ಷಿ ಹಣ್ಣಿನ ತೋಟದ ಮಾಲೀಕನಾದ. ಒಂದು ದಿವಸ ಇಬ್ರಾಹಿಂ ಕ್ವಾನ್ ಡೂಜಿ ಎನ್ನುವ ಸಂತನೊಬ್ಬ ಇವನ ತೋಟಕ್ಕೆ ಬಂದು ಒಂದು ಮರದ ಕೆಳಗೆ ಕುಳಿತಿದ್ದ. ಇವನು ಭಕ್ತಿಯಿಂದ ಆ ಸಂತನಿಗೆ ಕೆಲವು ದ್ರಾಕ್ಷಿ ಹಣ್ಣುಗಳನ್ನು ತಿನ್ನಲು ಕೊಟ್ಟ. ಅವನು ಅವುಗಳನ್ನು ತಿಂದು, ತನ್ನ ಬಾಯಲ್ಲಿದ್ದ ಎಂಜಲು ಹಣ್ಣುಗಳನ್ನು ಪ್ರಸಾದವಾಗಿ ಕೊಟ್ಟ. ಮೊಯಿನುದ್ದೀನ್ ಭಕ್ತಿಯಿಂದ ಅದನ್ನು ತಿಂದ. ಅವನ ಮನಸ್ಸಿನಲ್ಲಿ ಏನೋ ಒಂದು ಪರಿಣಾಮವಾಯಿತು. ಪ್ರಪಂಚದ ನಶ್ವರತೆಯ ಬಗ್ಗೆ ಜ್ಞಾನ ಉಂಟಾಯಿತು. ತನ್ನೆಲ್ಲಾ ಧನವನ್ನು ಬಡಬಗ್ಗರಿಗೆ ದಾನ ಮಾಡಿ ಸರ್ವಸಂಗ ಪರಿತ್ಯಾಗಿಯಾಗಿ ಸಮರಖಂಡ ಮತ್ತು ಬುಖಾರಾ ಎನ್ನುವ ಊರಿನತ್ತ ನಡೆಯಲಾರಂಭಿಸಿದ. ಈ ಊರುಗಳು ಆಗಿನ ಕಾಲದಲ್ಲಿ ವಿದ್ಯೆಗೂ ಆಧ್ಯಾತ್ಮಿಕತೆಗೂ ಪ್ರಸಿದ್ಧವಾಗಿದ್ದವು. ಅಲ್ಲಿ ಇಸ್ಲಾಂಧರ್ಮದ ಬಗ್ಗೆ ಜ್ಞಾನ ಪಡೆದಮೇಲೆ ಒಬ್ಬ ಪೀರ್ ಅಥವಾ ಗುರುವನ್ನು ಹುಡುಕಲಾರಂಭಿಸಿದ. ಹಜ್ರತ್ ಖ್ವಾಜಾ ಸಾಹೇಬ್ ಎನ್ನುವವನು ದೊಡ್ಡ ಸಂತನೆಂದು ತಿಳಿದು ಅವನನ್ನು ಹುಡುಕಿಕೊಂಡು ಹೊರಟ. ಸುಮಾರು ಇಪ್ಪತ್ತು ವರ್ಷಗಳ ಕಾಲ ಅವನ ಸೇವೆ ಮಾಡುತ್ತಾ ಸಂತನ ಕೃಪೆ ಗಳಿಸಿ ತೀವ್ರ ಸಾಧನೆ ಮಾಡಿದ. ಆ ಸಂತ ಈ ಸಾಧಕನ ನಮ್ರತೆಯಿಂದ ಸಂತೋಷಗೊಂಡು ತನ್ನೊಡನೆ ಪವಿತ್ರಸ್ಥಳಗಳಾದ ಮೆಕ್ಕಾ ಮತ್ತು ಮದೀನಕ್ಕೆ ಕರೆದುಕೊಂಡು ಹೋದ. ಆ ಹಾಜ್ ಯಾತ್ರೆಯಲ್ಲಿ ಒಂದು ದಿನ ಕನಸಿನಲ್ಲಿ ಪ್ರವಾದಿ ಹಜರತ್ ಮಹಮ್ಮದರು ಬಂದು ಈ ರೀತಿ ಆಜ್ಞೆ ಇತ್ತರಂತೆ : "ಮೊಯಿನುದ್ದೀನ್, ನೀನು ತಕ್ಷಣ ಭಾರತ ದೇಶಕ್ಕೆ ಹೊರಡು. ಸತ್ಯದ ಮಾರ್ಗವನ್ನು ಜನರಿಗೆ ಬೋಧಿಸು."

ಆ ಆಜ್ಞೆಯನ್ನು ಪಾಲಿಸಲು ಮೊಯಿನುದ್ದೀನ್ ಭಾರತದತ್ತ ಯಾತ್ರೆ ಹೊರಟ. ಹಲವಾರು ದೇಶ, ಊರುಗಳನ್ನು ಸುತ್ತಿಕೊಂಡು ಕೊನೆಗೆ ಭಾರತಕ್ಕೆ ಬಂದನು. ಆಗ ಅವನಿಗೆ ೫೨ ವರ್ಷಗಳು. ಕ್ರಿ.ಶ.೧೧೯೦ರಲ್ಲಿ ಭಾರತಕ್ಕೆ ಬಂದ. ರಾಜಪುತಾನದ ರಾಜನಾದ ಪೃಥ್ವೀರಾಜ್ ಚೌಹಾನ್ ಆಗ ಅಜ್ಮೀರನ್ನು ಆಳುತ್ತಿದ್ದ. ಅನಸಾಗರ್ ಸರೋವರದ ಹತ್ತಿರದ ಬೆಟ್ಟದಲ್ಲಿ ಈ ಮಹಾತ್ಮ ನೆಲೆಸಿದ. ಅವನ ಕೀರ್ತಿ ಹರಡಿದಂತೆಲ್ಲಾ ಜನ ಅವನ ಆಶೀರ್ವಾದ ಪಡೆಯಲು, ಅವನಿಗೆ ಗೌರವ ಸಲ್ಲಿಸಲು ಬರಲಾರಂಭಿಸಿದರು. ಅವನ ಸರಳ ಜೀವನ, ಹಾಗೂ ವ್ಯಕ್ತಿತ್ವದ ಪ್ರಭಾವದಿಂದ ಬೇಕಾದಷ್ಟು ಹಿಂದೂಗಳು ಇಸ್ಲಾಂ ಮತ ಸ್ವೀಕರಿಸಿದರು. ೧೧೯೨ರಲ್ಲಿ ಮಹಮದ್ ಘೋರಿ, ಪೃಥ್ವೀರಾಜ್‌ನನ್ನು

ಯುದ್ಧದಲ್ಲಿ ಸೋಲಿಸಿ, ರಾಜ್ಯವನ್ನು ಆಕ್ರಮಿಸಿಕೊಂಡ. ಮೊಯಿನುದ್ದೀನ್ ಬಗ್ಗೆ ಕೇಳಿದ ಘೋರಿ ತಾನೂ ಆ ಬೆಟ್ಟಕ್ಕೆ ಹೋಗಿ ಅವನ ಆಶೀರ್ವಾದ ಪಡೆದ. ೧೨೩೬ರಲ್ಲಿ ತನ್ನ ೯೭ನೇ ವಯಸ್ಸಿನಲ್ಲಿ ಈ ಸಂತ ದೇಹತ್ಯಾಗ ಮಾಡಿದ. ಅವನು ಜೀವಿಸಿದ್ದ ಸ್ಥಳದಲ್ಲೇ ದರ್ಗಾ ಅಥವಾ ಸಮಾಧಿಯನ್ನು ಕಟ್ಟಲಾಯಿತು.

ಅಜ್ಮೀರ್‌ನ ತರಗಾರ ಬೆಟ್ಟದ ತಪ್ಪಲಿನಲ್ಲಿ ಅದ್ಯೈ-ದಿನ್-ಕಾ-ಝೋಂಪ್ರಾ ಎನ್ನುವ ಕಲಾಕೃತಿಯ ಮಸೀದಿ ಇದೆ. ಇದು ೧೧ನೇ ಶತಮಾನದಲ್ಲಿ ಸಂಸ್ಕೃತ ವಿದ್ಯಾಲಯವಾಗಿತ್ತು. ೧೨ನೇ ಶತಮಾನದಲ್ಲಿ ಮಹಮದ್ ಘೋರಿ ಇದನ್ನು ಆಕ್ರಮಿಸಿಕೊಂಡು ಮಸೀದಿಯನ್ನು ಕಟ್ಟಿದ. ಕೇವಲ ೨-೩ ದಿನಗಳಲ್ಲಿ ಈ ಮಸೀದಿ ಕಟ್ಟಲ್ಪಟ್ಟಿತಂತೆ. ಕೆಳಗಿನ ಭಾಗಗಳೆಲ್ಲಾ ಹಿಂದೂ ಸಂಸ್ಕೃತಿಯನ್ನು ಸೂಚಿಸುವ ಶಿಲ್ಪಕಲೆಯಿಂದ ಕೂಡಿದ್ದರೆ ಗೋಪುರ ಮಾತ್ರ ಮಸೀದಿಯ ಆಕಾರದಲ್ಲಿದೆ.

ಹಿಂದೂಗಳ ತೀರ್ಥಸ್ಥಾನವೆಂದರೆ ಇಲ್ಲಿಂದ ೧೧ ಕಿ.ಮೀ. ದೂರದಲ್ಲಿರುವ ಪುಷ್ಕರ ಸರೋವರ. ಪದ್ಮಪುರಾಣದಲ್ಲಿ ಇದರ ಬಗ್ಗೆ ಉಲ್ಲೇಖವಿದೆ. ಆದುದರಿಂದಲೇ ಇದಕ್ಕೆ ಮಹತ್ವ. ಜಗತ್ತಿನ ಸೃಷ್ಟಿಕರ್ತನಾದ ಬ್ರಹ್ಮ ಒಮ್ಮೆ ಒಂದು ಯಜ್ಞ ಮಾಡುವ ದೃಷ್ಟಿಯಿಂದ ಒಂದು ಒಳ್ಳೆಯ ಸ್ಥಳವನ್ನು ಹುಡುಕುತ್ತಿದ್ದ. ಹಾಗೆ ಆಕಾಶದಲ್ಲಿ ಸುತ್ತುತ್ತಿದ್ದಾಗ ಅವನ ಕೈಯಲ್ಲಿದ್ದ ಒಂದು ಕಮಲ ಪುಷ್ಪ ಕೈಯಿಂದ ಜಾರಿ ಬಿತ್ತು. ಅದು ಬಿದ್ದೆಡೆ ನೀರು ಉಕ್ಕಿತು. ಅದೇ ಪುಷ್ಕರ. ಇಲ್ಲಿ ಅವನು ತನ್ನ ಯಜ್ಞವನ್ನು ಮಾಡಿದ. ಇಲ್ಲಿ ಬ್ರಹ್ಮನಿಗೆ ಒಂದು ದೇವಸ್ಥಾನವಿದೆ. ಬಹುಶಃ ಬ್ರಹ್ಮನಿಗೆ ಬೇರೆ ಎಲ್ಲೂ ದೇವಸ್ಥಾನವೇ ಇಲ್ಲ. ಇಲ್ಲೂ ಕೂಡ ಪೂಜೆ ಇಲ್ಲ. ಕಾರ್ತಿಕ ಪೂರ್ಣಿಮೆಯಂದು ಸಹಸ್ರಾರು ಜನ ಈ ತೀರ್ಥದಲ್ಲಿ ಸ್ನಾನಮಾಡಲು ಬರುತ್ತಾರೆ. ಶ್ರೀಮಾತೆ ಶಾರದಾದೇವಿಯವರೂ ಈ ತೀರ್ಥದಲ್ಲಿ ಸ್ನಾನ ಮಾಡಿದ್ದಾರೆ. ಅವರ ಮೂರ್ತಿಯೂ ಒಂದು ಸ್ಥಳದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟಿದೆ. ಅಲ್ಲಿಂದ ೧೩೦ ಕಿ.ಮೀ. ದೂರದಲ್ಲಿರುವ ಜೈಪುರಕ್ಕೆ ಬಂದೆವು.

ಈ ಜೈಪುರವನ್ನು pink city ಅಥವಾ ಗುಲಾಬಿ ನಗರ ಎಂದು ಕರೆಯುತ್ತಾರೆ. ಊರಿನ ಅರ್ಧಕ್ಕಿಂತ ಹೆಚ್ಚು ಕಟ್ಟಡಗಳು ಗುಲಾಬಿ ಬಣ್ಣವನ್ನು ಹೊಂದಿರುವುದರಿಂದ ಇದಕ್ಕೆ ಆ ಹೆಸರು. ಇಲ್ಲಿ ಎಲ್ಲೆಡೆ ಕೋಟೆಗಳು ಹಾಗೂ ಸರೋವರಗಳನ್ನು ಕಾಣಬಹುದು. ಇಲ್ಲಿ City palace ಎನ್ನುವ ಒಂದು ಅರಮನೆ ಇದೆ. ಅದು ಎಷ್ಟು ದೊಡ್ಡದೆಂದರೆ ಊರಿನ ಏಳನೇ ಒಂದು ಭಾಗವನ್ನು ಆಕ್ರಮಿಸಿಕೊಂಡಿದೆ. ಅರಮನೆಯ ಒಂದು ಭಾಗವನ್ನು ಈಗ ವಸ್ತುಸಂಗ್ರಹಾಲಯವನ್ನಾಗಿ ಮಾಡಿದ್ದಾರೆ. ಅಲ್ಲಿ ಕೈಬರಹದ ಪುಸ್ತಕಗಳು, ಜಮಖಾನಗಳು, ವಿವಿಧ ಆಯುಧಗಳನ್ನು ಕಾಣಬಹುದು. ಅದರ ಪಕ್ಕದಲ್ಲೇ "ಜಂತರ್ ಮಂತರ್" ಎಂದು ಪ್ರಸಿದ್ಧವಾದ ಬಾಹ್ಯಾಕಾಶವನ್ನು ವೀಕ್ಷಿಸುವ ಹಾಗೂ ಮಾಪನ ಮಾಡುವ ಯಂತ್ರಗಳಿವೆ. ಆಗಿನ ಕಾಲದಲ್ಲಿ ಸೂರ್ಯನ ಉದಯಕಾಲವನ್ನು ತಿಳಿಯುವ ಬಗೆ, ಸೂರ್ಯನು ಯಾವ ರಾಶಿಯಲ್ಲಿ ಇರುತ್ತಾನೆ ಎಂದು ಕಂಡುಹಿಡಿಯುವುದು, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಯಂತ್ರಗಳನ್ನು ಕಾಣಬಹುದು. ಇದಲ್ಲದೆ ಒಂದು ಅದ್ಭುತವಾದ ಶ್ರೀಕೃಷ್ಣನ ದೇವಾಲಯವಿದೆ. ಈ ನಗರ ಜನರಿಂದ ತುಂಬಿದ್ದರೂ ಅತಿ ಸ್ವಚ್ಛವಾಗಿರುವುದನ್ನು ಕಾಣಬಹುದು. ಇದು ಹಲವಾರು ಮುಸ್ಲಿಂ ರಾಜರುಗಳ, ಹಾಗೂ ರಾಜಪೂತರುಗಳ ಚರಿತ್ರೆಯಿಂದ ತುಂಬಿದ ಪ್ರದೇಶವಾಗಿದೆ. ಜೈಪುರದೊಂದಿಗೆ ನಮ್ಮ ರಾಜಾಸ್ಥಾನದ ಯಾತ್ರೆ ಮುಗಿಯಿತು.

---

ಮುಸ್ಲಿಂ ಸಾಮ್ರಾಜ್ಯವು ಭಾರತದಲ್ಲಿ ವಿಸ್ತರಿಸುತ್ತಿರುವಾಗ ಚಿತ್ತೂರಿನ ರಾಣಿ ಪದ್ಮಿನಿಯು ಸೌಂದರ್ಯಕ್ಕೆ ಪ್ರಸಿದ್ಧಳಾಗಿದ್ದಳು. ಆಕೆಯ ಸೌಂದರ್ಯದ ವಿಷಯ ಸುಲ್ತಾನನಿಗೆ ತಿಳಿದು, ಅವಳನ್ನು ತನ್ನ ಅಂತಃಪುರಕ್ಕೆ ಕಳಿಸಬೇಕೆಂದು ಅವನು ಪತ್ರ ಬರೆಯುತ್ತಾನೆ. ಇದರ ಪರಿಣಾಮವಾಗಿ ಚಿತ್ತೂರಿನ ರಾಜನಿಗೂ ಸುಲ್ತಾನನಿಗೂ ದೊಡ್ಡ ಯುದ್ಧ ನಡೆಯುತ್ತದೆ. ಮಹಮ್ಮದೀಯರು ಚಿತ್ತೂರಿನ ಮೇಲೆ ಆಕ್ರಮಣ ಮಾಡುತ್ತಾರೆ. ಸಾಮ್ರಾಜ್ಯದ ರಕ್ಷಣೆ ಅಸಾಧ್ಯವೆಂದು ರಜಪೂತರಿಗೆ ತಿಳಿದಾಗ ಗಂಡಸರೆಲ್ಲ ಕತ್ತಿಯನ್ನು ಹಿಡಿದುಕೊಂಡು ಹೋರಾಡಿ ಮರಣಹೊಂದಿದರು, ಮತ್ತು ಮಹಿಳೆಯರು ಬೆಂಕಿಯಲ್ಲಿ ಬಿದ್ದು ಪ್ರಾಣ ತೆತ್ತರು.

ಪುರುಷರೆಲ್ಲ ಮಡಿದ ಮೇಲೆ ಜಯಶಾಲಿಯಾದ ಸುಲ್ತಾನನು ನಗರವನ್ನು ಪ್ರವೇಶಿಸಿದನು. ಅಲ್ಲಿ ಬೀದಿಯಲ್ಲಿ ಭಯಂಕರ ಬೆಂಕಿ ಉರಿಯುತ್ತಿತ್ತು. ರಾಣಿಯನ್ನು ಹಿಂಬಾಲಿಸಿ ಮಹಿಳೆಯರು ಬೆಂಕಿಯ ಸುತ್ತ ತಿರುಗುವುದನ್ನು ಅವನು ಕಂಡನು. ಅವನು ಹತ್ತಿರ ಹೋಗಿ ಬೆಂಕಿಗೆ ಬೀಳುವುದು ಬೇಡವೆಂದು ಹೇಳಿದಾಗ ಅವಳು, " ರಜಪೂತ ಮಹಿಳೆಯು ನಿನ್ನನ್ನು ಆದರಿಸುವ ರೀತಿ ಇದು " ಎಂದು ಹೇಳಿ ಬೆಂಕಿಗೆ ಬೀಳುತ್ತಾಳೆ.

ಮಹಮ್ಮದೀಯರಿಂದ ಮಾನಹಾನಿಗೆ ಒಳಗಾಗುವುದನ್ನು ತಪ್ಪಿಸಿಕೊಳ್ಳಲು ಆ ದಿವಸ ೭೪, ೫೦೦ ಮಹಿಳೆಯರು ಬೆಂಕಿಗೆ ಆಹುತಿಯಾದರಂತೆ ! ಇಂದಿಗೂ ಕೂಡ ಪತ್ರವನ್ನು ಬರೆದು ಅದನ್ನು "೭೪ ½ " ಎಂದು ಬರೆಯುವ ರೂಢಿಯಿದೆ. ಇದರ ಅರ್ಥ, ಬೇರೆ ಯಾರಾದರೂ ಆ ಪತ್ರವನ್ನು ತೆರೆದು ನೋಡಿದರೆ ಅವರು ೭೪,೫೦೦ ಸ್ತ್ರೀಹತ್ಯಾ ಪಾಪಕ್ಕೆ ಗುರಿಯಾಗುತ್ತಾರೆ ಎಂದು.

– ಸ್ವಾಮಿ ವಿವೇಕಾನಂದ